MediaTAR
...Tracking, Analysis & Reportage

| | | | |
|---|---|---|---|
| **PUBLICATION** | Vijay Karnataka | **DATE** | 11.02.2019 |
| **EDITION** | Bangalore | **PAGE NO** | 03 |
| **HEADLINE** | Ultimate aim of Education is not Employment, but Empowerment & Enlightenment, says Honourable Vice President of India, M. Venkaiah Naidu | | |

## ವಿಶ್ವವಿದ್ಯಾಲಯಗಳಿಗೆ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಕರೆ

# ಕೌಶಲ ಕಲಿಕೆಗೆ ಬೇಕು ಹೆಚ್ಚಿನ ಆದ್ಯತೆ

**ವಿಕ ಸುದ್ದಿಲೋಕ** ಬೆಂಗಳೂರು

ವಿಶ್ವವಿದ್ಯಾಲಯಗಳು ದೇಶ ಕಟ್ಟುವ ಕೆಲಸದಲ್ಲಿ ಯುವ ಪದವೀಧರರನ್ನು ತೊಡಗಿಸಿಕೊಳ್ಳಲು ಅನುಕೂಲವಾಗುವಂಥ ಕೌಶಲವನ್ನು ಕಲಿಸಲು ಆದ್ಯತೆ ನೀಡಲಿ ಎಂದು ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಕರೆ ನೀಡಿದರು.

### ಸಿಎಂಆರ್ ವಿವಿ ನೂತನ ಕ್ಯಾಂಪಸ್ ಉದ್ಘಾಟನೆ

ನಗರದ ಹೊರ ವಲಯದ ಬಾಗಲೂರು ಬಳಿ ಸಿಎಂಆರ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಉದ್ಘಾಟಿಸಿ ಭಾನುವಾರ ಮಾತನಾಡಿ "ಭಾರತದಲ್ಲಿ ಪ್ರತಿಭಾವಂತರಿಗೆ ಬರವಿಲ್ಲ. ಪ್ರತಿಯೊಬ್ಬರಲ್ಲೂ ಒಂದೊಂದು ಬಗೆಯ ಜ್ಞಾನ ಇದೆ. ಇದಕ್ಕೆ ಸಾಣೆ ಹಿಡಿಯುವ ಕೆಲಸವನ್ನು ವಿವಿಗಳು ಮಾಡಿದ್ದೇ ಆದಲ್ಲಿ ವಿಶ್ವ ಖ್ಯಾತನಾಮರನ್ನು ಸೃಷ್ಟಿಸಲು ಸಾಧ್ಯವಿದೆ," ಎಂದು ಪ್ರತಿಪಾದಿಸಿದರು.

"ದೇಶದಲ್ಲಿಂದು 800 ವಿವಿಗಳು ಇವೆಯಾದರೂ, ಸೆಂಟರ್ ಆಫ್ ಎಕ್ಸಲೆನ್ಸ್‌ನಂಥ ಸಂಸ್ಥೆಗಳು ಆರಂಭವಾಗುತ್ತಿಲ್ಲ. ಪ್ರತಿಭೆ ಇದ್ದವರನ್ನು ಗುರುತಿಸಿ ಅವಕಾಶಗಳನ್ನು ನೀಡುವ ವಾತಾವರಣ ಸೃಷ್ಟಿಯಾಗಬೇಕು. ಇತ್ತೀಚೆಗೆ ಕೇಂದ್ರ ಸರಕಾರ ಐಐಟಿ, ಐಐಎಂ ಸ್ಥಾಪನೆಗೆ ಮುಂದಾಗಿರುವಂತೆ ಖಾಸಗಿ ಸಹಭಾಗಿತ್ವದಲ್ಲೂ ಉನ್ನತ ಶಿಕ್ಷಣ ಸಂಸ್ಥೆಗಳು ಸ್ಥಾಪನೆಯಾಗಬೇಕಿದೆ," ಎಂದರು.



ಬಾಗಲೂರು ಬಳಿ ಸಿಎಂಆರ್ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಅನ್ನು ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಉದ್ಘಾಟಿಸಿದರು.

### ಮಾತೃಭಾಷೆ ಮರೆಯದಿರಿ

"ಮಾತೃಭಾಷೆಯೇ ವ್ಯಕ್ತಿಯೊಬ್ಬನ ಏಳಿಗೆಗೆ ಮೆಟ್ಟಿಲಾಗುತ್ತದೆ. ಸಂವಹನ, ಸಂಪರ್ಕ, ಜ್ಞಾನಾರ್ಜನೆಯನ್ನು ಮಾತೃಭಾಷೆಯಿಂದಲೇ ಪಡೆದುಕೊಳ್ಳಬಹುದು. ಯಾವುದೇ ಭಾಷೆಯಾದರೂ ಮನೆಯಲ್ಲಿ ಅನ್ಯ ಭಾಷೆ ಯಲ್ಲಿ ಮಾತನಾಡುವುದು ಅಷ್ಟು ಸರಿಯೆನಿಸದು. ಕಲಿಕೆ ದೃಷ್ಟಿಯಿಂದ ಇತರೆ ಭಾಷೆ ಯನ್ನು ಕರಗತ ಮಾಡಿಕೊಳ್ಳಿ. ತಾಯಿ, ಜನ್ಮಸ್ಥಳ, ಮಾತೃಭಾಷೆ, ಮಾತೃಭೂಮಿ ಹಾಗೂ ಗುರು- ಈ ಐದು ವಿಷಯಗಳನ್ನು ಮರೆ ಯದೆ ಜ್ಞಾಪಕವಿಟ್ಟುಕೊಂಡಲ್ಲಿ ಯಶಸ್ಸು ಸಿದ್ಧಿಸುತ್ತದೆ," ಎಂದು ವೆಂಕಯ್ಯ ನಾಯ್ಡು ಕಿವಿಮಾತು ಹೇಳಿದರು.

ಜಿಡಿಪಿ ಲಾಭ ಶಿಕ್ಷಣಕ್ಕೆ ಸಂಪನ್ಮೂಲವಾಗಲಿ: "ವಿಶ್ವದ ಆರ್ಥಿಕತೆ ಶೇ.3ರಷ್ಟು ಕುಸಿದಿದ್ದರೆ, ಭಾರತದ ಜಿಡಿಪಿ ಏರು ಗತಿಯಲ್ಲಿದೆ. ಚೀನಾ, ಅಮೆರಿಕ, ಜಪಾನ್ ಹಿಂದಿಕ್ಕಿ ಶೇ.7.5ರಷ್ಟು ಎತ್ತರಕ್ಕೆ ಹೋಗಲಿದೆ ಎಂಬುದಾಗಿ ವಿಶ್ವಬ್ಯಾಂಕ್, ಐಎಂಎಫ್, ಎಡಿಬಿ ಸಂಸ್ಥೆಗಳು ಉಲ್ಲೇಖಿಸಿವೆ. ಶೇ.60ರಷ್ಟು ಜನಸಂಖ್ಯೆ 35 ವರ್ಷದೊಳಗಿದ್ದು, ಯುವ ಭಾರತ ಎನಿಸಿಕೊಂಡಿದೆ. ಜಿಡಿಪಿಯ ಲಾಭ ಶಿಕ್ಷಣ ಕ್ಷೇತ್ರಕ್ಕೆ ಸಂಪನ್ಮೂಲವಾಗಬೇಕು. ದಿಲ್ಲಿಯಿಂದ ಹಳ್ಳಿವರೆಗಿನ ಸರಕಾರಗಳು ಪ್ರಾಥಮಿಕ/ಪ್ರೌಢಶಿಕ್ಷಣಕ್ಕೆ ಒತ್ತು ನೀಡಿದಲ್ಲಿ ಇತರ ರಾಷ್ಟ್ರಗಳ ಶೈಕ್ಷಣಿಕ ಸಾಧನೆಯ ಸಾಲಿನಲ್ಲಿ ಭಾರತ ನಿಲ್ಲಲು ಸಾಧ್ಯವಾಗಲಿದೆ," ಎಂದು ನಾಯ್ಡು ಹೇಳಿದರು.

ರಾಜ್ಯಸಭಾ ಸದಸ್ಯ ಹಾಗೂ ಸಿಎಂಆರ್ ಶೈಕ್ಷಣಿಕ ಸಮೂಹ ಸಂಸ್ಥೆಗಳ ಚೇರ್ಮನ್ ಕೆ.ಸಿ.ರಾಮಮೂರ್ತಿ, ಸಿಎಂಆರ್ ವಿವಿ ಕುಲಪತಿ ಡಾ.ಸಬಿತಾ ರಾಮಮೂರ್ತಿ, ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಚೇರ್ಮನ್ ಡಾ.ಕೆ.ಪಿ.ಗೋಪಾಲಕೃಷ್ಣ ಮತ್ತಿತರರಿದ್ದರು.

### ಚೀಟಿ ರವಾನಿಸಿದ ಪಿಎಸ್

ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು ಅರ್ಧ ಗಂಟೆಗೂ ಹೆಚ್ಚು ಕಾಲ ಶಿಕ್ಷಣ ಕ್ಷೇತ್ರದ ಕುರಿತು ಮಾತನಾಡಿದರು. ಕಿಕ್ಕಿರಿದು ಸೇರಿದ್ದ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಯಿಂದಾಗುವ ಲಾಭಗಳ ಕುರಿತು ಹಲವು ಉದಾಹರಣೆಗಳನ್ನು ನೀಡಿ ಚಪ್ಪಾಳೆ ಗಿಟ್ಟಿಸಿದರು. ಭಾಷಣ ಮತ್ತಷ್ಟು ಮುಂದುವರಿಯುವ ಲಕ್ಷಣ ಕಂಡು ಬಂದಿದ್ದರಿಂದ ನಾಯ್ಡು ಆಪ್ತ ಕಾರ್ಯದರ್ಶಿ ಚೀಟಿ ಕಳುಹಿಸಿದರು. ದಿಲ್ಲಿಯಲ್ಲಿ ಸಂಜೆ ನಡೆಯುವ ಕಾರ್ಯಕ್ರಮದಲ್ಲಿ ನಾಯ್ಡುರವರು ಭಾಗಿಯಾಗಲು ಒಪ್ಪಿಕೊಂಡಿದ್ದು, ವಿಮಾನ ದಲ್ಲಿ ತೆರಳಬೇಕಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯದರ್ಶಿ ಕಳುಹಿಸಿದ ಚೀಟಿಯನ್ನು ಗಮನಿಸಿ ಭಾಷಣವನ್ನು ಕೊನೆಗೊಳಿಸಿದರು.